# ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.ದಂ.ನ್ಯಾಯಾಲಯ, ಶಹಾಪೂರ

CW 3 PW 8

ಸಿ.ಸಿ. ನಂ. 59/2021

| | | |
|---|---|---|
| ಹೆಸರು | ಃ | ಚೆನ್ನಪ್ಪಗೌಡ |
| ತಂದೆಯ ಹೆಸರು | ಃ | ಲಕ್ಷ್ಮಣಗೌಡ |
| ವಯಸ್ಸು | ಃ | 42 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸ | ಃ | ಶಖಾಪೂರ |

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ 12-01-2026.**

**ಮುಖ್ಯ ವಿಚಾರಣೆ ಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ಃ**

ನನಗೆ ಚಾಸಾ1 ರವರ ಪರಿಚಯ ಇರುವುದಿಲ್ಲ. ನನಗೆ ಆರೋಪಿತರ ಪರಿಯ ಇರುವುದಿಲ್ಲ

2. ಪೊಲೀಸರು ನನ್ನ ಹಾಗೂ ಚಾಸಾ2 ರವರ ಸಮಕ್ಷಮ ಯಾವುದೇ ವಸ್ತುವನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ. ಸಾಕ್ಷಿ ನಿಪಿ.2 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ.2(ಬಿ) ಎಂದು ಗುರುತಿಸಲಾಯಿತು. ಪೊಲೀಸರು ನಿಪಿ.2 ರ ಸಮಯದಲ್ಲಿ ನಿಪಿ.3 ಮತ್ತು 4 ರಂತೆ ಪೊಟೋಗಳನ್ನು ತೆಗೆಸಿದ್ದು ಆದರೆ ಯಾವ ವಿಚಾರಕ್ಕೆ ಎಂದು ನನಗೆ ಗೊತ್ತಿರುವುದಿಲ್ಲ.

**(ಈ ಹಂತದಲ್ಲಿ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದರು. ಅನುಮತಿ ಕೊಟ್ಟಿದೆ)**

**ಪಾಟೀ ಸವಾಲುಃ ಸ.ಸ.ಅ. ರವರಿಂದಃ**

ದಿಃ 15-08-2020 ರಂದು ಪೊಲೀಸರು ಸಂಜೆ 05.40 ರಿಂದ 6.40 ರವರೆಗೆ ಕೊಡನಮನಳ್ಳಿ ಕ್ರಾಸ ಹತ್ತಿರ ಬೀ ಗುಡಿ - ಜೇವರ್ಗಿ ಮುಖ್ಯ ರಸ್ತೆ ಮೇಲೆ ನಿಪಿ.2 ರಂತೆ

ಜಪ್ತಿ ಪಂಚನಾಮೆ ಮಾಡಿ ನಿಪಿ.3 ಮತ್ತು 4 ರಂತೆ ಫೋಟೋಗಳನ್ನು ತೆಗೆಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಆದ್ದರಿಂದ ಎಲ್ಲಾ ವಿಚಾರಗಳು ಗೊತ್ತಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಶಹಾಪೂರ.